# ವೃಕ್ಷಪ್ರೇಮಿ ಜಯಲಕ್ಷ್ಮಮ್ಮ

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಕಗ್ಗೆರೆಯ ಶ್ರೀ ಸಿದ್ಧಲಿಂಗೇಶ್ವರರ ತಪೋಭೂಮಿ ಸಮೀಪದಲ್ಲಿದೆ ರಾಶಿವನ. ಇಲ್ಲಿರುವ ಗಿಡಮರಬಳ್ಳಿಗಳ ಕುರಿತು ಗೌಡಗೆರೆಯ ಜಯಲಕ್ಷ್ಮಮ್ಮನವರ ಬಾಯಿಂದ ವೀಕ್ಷಕ ವಿವರಣೆ ಕೇಳುವುದೇ ಒಂದು ಸೊಗಸು.

64 ರ ವಯೋವೃದ್ಧೆ ಜಯಲಕ್ಷ್ಮಮ್ಮ ಈ ಉದ್ಯಾನವನದೊಳಗೆ ಬೆಳೆದು ನಿಂತಿರುವ ಆಲ, ಮುತ್ತುಗ, ಬೇವು, ಕಗ್ಗಲಿ, ರಕ್ತಚಂದನ, ಪಾದ್ರಿ, ಮಾವು, ಹಲಸು, ನೇರಳೆ ಇವೇ ಮೊದಲಾದ ನೂರಾರು ಬಗೆಯ ಮರಗಳ ಬಗ್ಗೆ ಬೋಧಪ್ರದ ಮಾಹಿತಿ ನೀಡುತ್ತಾರೆ. ಹಲವಾರು ವರ್ಷಗಳಿಂದ ಹೀಗೆ ಸ್ವಇಚ್ಛೆಯಿಂದ ಈ ಕೆಲಸದಲ್ಲಿ ತೊಡಗಿಸಿಕೊಂಡಿರುವ ವೃಕ್ಷಪ್ರೇಮಿಗೆ ಅಲ್ಲಿಗೆ ಭೇಟಿ ನೀಡಿದವರು ಸಂತೋಷದಿಂದ ನೀಡುವ ಬಿಡಿಗಾಸಿಂದಲೇ ಜೀವನ ನಡೆಸುವುದಾಗಿ ಹೇಳುತ್ತಾರೆ ಈ ಅವಿವಾಹಿತೆ.

**ಮ.ಗು.ಬಸವಣ್ಣ, ನಂಜನಗೂಡು**





# ಶಿಲ್ಪಗಳಲ್ಲಿ ಗಣೇಶನ ಜನ್ಮವೃತ್ತಾಂತ

ಪುರಾಣ ಪುಣ್ಯಕತೆಗಳಲ್ಲಿ ಬಿಂಬಿಸುವಂತೆ ಗಣಪತಿಯು ಪಾರ್ವತಿಯ ಬೆವರಿನಿಂದ ಮಾಡಿದ ಮೂರ್ತಿಗೆ ಜೀವ ತುಂಬಿರುವ ಘಟನೆಯನ್ನು ತಿಳಿದಿದ್ದೇವೆ. ಅದೇ ಕಥಾನಕವನ್ನು ಬಿಂಬಿಸುವ ನಿಟ್ಟಿನಲ್ಲಿ ಇಡಗುಂಜಿಯ ವಿನಾಯಕವನದಲ್ಲಿ ತದ್ರೂಪಿ ಶಿಲ್ಪಕಲಾ ಕೃತಿಗಳನ್ನು ರಚಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಇಡಗುಂಜಿ ಕ್ರಾಸ್ ಬಳಿ ಈ ವನವಿದೆ.

**-ಬಳಕೂರು ವಿ.ಎಸ್.ನಾಯಕ, ಬೆಂಗಳೂರು**

# ಕಲಾತ್ಮಕ ಕಂಬಗಳ ಮಹಾಮಂಟಪ

ಕಲ್ಯಾಣದ ಚಾಲುಕ್ಯರು ವಾಸ್ತುಕಲೆಗೆ ನೀಡಿದ ಕೊಡುಗೆ ಅಪಾರ. ಉತ್ತರ ಕರ್ನಾಟಕದಲ್ಲಿ ನೂರಾರು ದೇವಾಲಯಗಳನ್ನು ನಿರ್ಮಿಸಿದ ಕೀರ್ತಿ ಕಲ್ಯಾಣ ಚಾಲುಕ್ಯರದು. ಕಲ್ಯಾಣ ಚಾಲುಕ್ಯರ ಶ್ರೇಷ್ಠ ಕಲಾಕೃತಿಗಳಲ್ಲಿ ಪ್ರಮುಖವಾದುದು ಇಟಗಿಯ ಮಹಾದೇವ ದೇವಾಲಯ. ಇದು ತೆರೆದ ಮಂಟಪವನ್ನೂ ಹೊಂದಿದ್ದು ಸುಮಾರು 68 ಕಂಬಗಳನ್ನು ಒಳಗೊಂಡಿದೆ. ಅದರಲ್ಲಿ ಸುಮಾರು 23 ಕಂಬಗಳು ನೆಲದಿಂದ ಚಾವಣಿಗೆ ಆಧಾರವನ್ನು ಒದಗಿಸಿವೆ. ಸೂಕ್ಷ್ಮ ಕೆತ್ತನೆಗಳಿಂದ ಅಲಂಕೃತಗೊಂಡಿರುವ ಮಹಾಮಂಟಪ ಕಂಬಗಳ ಆಧಾರ ಮೇಲೆ ನೆಲೆಗೊಂಡಿದೆ. ಕಂಬಗಳು ಹೂಜಿ, ಗಂಟೆ, ಪುಷ್ಪಪಾತ್ರೆಯಂತಹ ವೃತ್ತಾಕಾರದ ವಿವಿಧ ವಿನ್ಯಾಸಗಳನ್ನು ಹೊಂದಿವೆ. ಮಹಾಮಂಟಪವನ್ನು ಹೆಚ್ಚಿನ ಪ್ರಮಾಣದಲ್ಲಿ ಭಕ್ತರು ಸೇರಲು ಅನುಕೂಲವಾಗುವಂತೆ ವಿಶಾಲವಾಗಿ ನಿರ್ಮಿಸಲಾಗಿದೆ.

**-ಪ.ನಾ.ಹಳ್ಳಿ ಹರೀಶ್ ಕುಮಾರ್, ತುಮಕೂರು**

